## ಐವಾಟರ್‌ಮಾರ್ಕ್

ನಿಮ್ಮ ಐಫೋನ್ ಮೂಲಕ ತೆಗೆದ ಫೋಟೋಗೆ ನಿಮ್ಮದೇ ಕಾಪಿರೈಟ್ ಉಳಿಸಿಕೊಳ್ಳಬೇಕಾದರೆ ಈ ಆ್ಯಪ್ ಅನುಕೂಲಕರ. ಕ್ಯೂಆರ್ ಕೋಡ್ ಅನ್ನು ಫೋಟೊ ಮೇಲೆ ಒತ್ತಲು ಸಹಕಾರಿ. ಫಾಂಟ್‌ಗಳಲ್ಲಿ ವೈವಿಧ್ಯತೆಯಿದೆ. ಫಾಂಟ್ ಗಾತ್ರವನ್ನು ಸುಲಭವಾಗಿ ಹೆಚ್ಚು– ಕಡಿಮೆ ಮಾಡಬಹುದು. ಫೋಟೋದ ಯಾವ ಜಾಗದಲ್ಲಿ ಬೇಕಾದರೂ ಒತ್ತಬಹುದು. ಕ್ಯಾಮೆರಾದಲ್ಲಿ ತೆಗೆದ ಫೋಟೋಗಳನ್ನು ಮೊಬೈಲ್‌ಗೆ ವರ್ಗಾಯಿಸಿಕೊಂಡರೆ ಅವುಗಳಿಗೂ ವಾಟರ್ ಮಾರ್ಕ್ ಹಾಕಬಹುದು. ಇದಕ್ಕೆ 120 ರೂಪಾಯಿ ಶುಲ್ಕವಿದೆ.




Journeys of Invention

## ಜರ್ನೀಸ್ ಆಫ್ ಇನ್ವೆನ್ಶನ್

ಇದೊಂದು ಐಪ್ಯಾಡ್ ಆ್ಯಪ್ ಆಗಿದ್ದು, ಲಂಡನ್ನಿನ ವಿಜ್ಞಾನ ವಸ್ತು ಸಂಗ್ರಹಾಲಯದಲ್ಲಿರುವ ಅಪರೂಪದ ವಸ್ತುಗಳನ್ನು ನೋಡಬಹುದು. ಅನಿಮೇಶನ್, ಫೋಟೊ, ದನಿ, ವಿಡಿಯೋ ಹಾಗೂ ವೀಕ್ಷಕ ವಿವರಣೆ ಮೂಲಕ ನಿಜವಾಗಿಯೂ ಅಲ್ಲಿಗೇ ಹೋಗಿ ನೋಡಿದಂತೆ ಅನಿಸುತ್ತದೆ. ಸುಮಾರು 1500 ವರ್ಷಗಳ ಹಿಂದಿನ ವಸ್ತುಗಳೂ ಅಲ್ಲಿದ್ದು, ವೈದ್ಯಕೀಯ, ಖಗೋಲ, ಎಲೆಕ್ಟ್ರಾನಿಕ್ಸ್, ವೈಮಾನಿಕ ಮೊದಲಾದ ವಿಭಾಗಗಳಿವೆ. 620 ರೂಪಾಯಿ ಶುಲ್ಕ ನೀಡಬೇಕು.

## ಶೇರ್‌ಇಟ್

ದೊಡ್ಡ ದೊಡ್ಡ ಫೈಲುಗಳನ್ನು ಒಂದು ಡಿವೈಸ್‌ನಿಂದ ಇನ್ನೊಂದು ಡಿವೈಸ್‌ಗೆ ವರ್ಗಾಯಿಸಲು ಇದು ಅನುಕೂಲಕರ. ಬ್ಲೂಟೂಥ್ ಮೂಲಕ ದೊಡ್ಡ ಗಾತ್ರದ ಫೈಲುಗಳು ತಕ್ಷಣಕ್ಕೆ ಹೋಗುವುದು ಕಷ್ಟಕರ. ಹೀಗಾಗಿ ಇದರ ಮೂಲಕ ಮೊಬೈಲ್, ಕಂಪ್ಯೂಟರ್ ಮೊದಲಾದವುಗಳಿಗೆ ಫೊಟೊ, ವಿಡಿಯೊ ಸೇರಿದಂತೆ ಎಲ್ಲಾ ರೀತಿಯ ಫೈಲುಗಳನ್ನು ವರ್ಗಾಯಿಸಬಹುದು.



## ಸ್ಕ್ವೇರ್ ಕ್ಯಾಷ್

ಅದ್ಭುತ ವಿನ್ಯಾಸ ಹೊಂದಿರುವ ಈ ಆ್ಯಪ್ ಹಣವನ್ನು ಕಳಿಸಲು ಹಾಗೂ ಪಡೆಯಲು ಹಲವು ವಿಧಾನಗಳನ್ನು ಒಳಗೊಂಡಿದೆ. ಯಾವುದೇ ಕ್ರೆಡಿಟ್ ಕಾರ್ಡ್ ಬೆಂಬಲ ಇಲ್ಲದಿದ್ದರೂ, ಅಲ್ಪ ಮೊತ್ತದ ಹಣದ ವಹಿವಾಟಿಗೆ ಉತ್ತಮ ಆ್ಯಪ್. ಹಿಂದೆ ಸ್ಕ್ವೇರ್ ವ್ಯಾಲೆಟ್ ಆರಂಭಿಸಿದ್ದ ಇದೇ ಕಂಪೆನಿ ಜನಪ್ರಿಯತೆ ಕೊರತೆಯಿಂದ ವಾಪಸ್ಸು ಪಡೆದಿತ್ತು. ಆದರೆ ಈಗ ಗೂಗ್ಲ್ ವ್ಯಾಲೆಟ್‌ಗೆ ಪೈಪೋಟಿ ನೀಡುವ ಉದ್ದೇಶದಿಂದ ಈ ಉಚಿತ ಆ್ಯಪ್ ಆರಂಭಿಸಿದ್ದು, ಐಒಎಸ್, ಆ್ಯಂಡ್ರಾಯ್ಡ್ ಮತ್ತು ವಿಂಡೋಸ್ ಫೋನ್‌ಗಳನ್ನು ಬೆಂಬಲಿಸುತ್ತದೆ.







## ಕಿಹೂ 360 ಸೆಕ್ಯುರಿಟಿ

ಆ್ಯಂಡ್ರಾಯ್ಡ್ ಫೋನಿಗೆ ವೈರಸ್‌ನಿಂದ ರಕ್ಷಣೆ ನೀಡುವ ಆ್ಯಪ್ ಇದು. ಫೋನ್ ಕಳವಿನ ವಿರುದ್ಧವೂ ರಕ್ಷಣೆ ಇದೆ. ಕರೆ ಮತ್ತು ಟೆಕ್ಸ್ಟ್ ಬ್ಲಾಕ್ ಮಾಡುವ ಸೌಲಭ್ಯವೂ ಇದೆ. ಸಿಮ್ ಅಲರ್ಟ್ ಇದ್ದು, ಆ್ಯಪ್ ಲಾಕರ್ ಸವಲತ್ತಿದೆ. ಅತ್ಯಂತ ವೇಗವಾಗಿ ಆ್ಯಪ್‌ಗಳನ್ನು ಕ್ಲೀನ್ ಮಾಡುತ್ತದೆ. ಜಂಕ್ ಫೈಲ್‌ಗಳನ್ನು ತೆಗೆದು ಹಾಕಿ ರ್‍ಯಾಮ್‌ನಲ್ಲಿ ಜಾಗ ಮಾಡಿಕೊಡುತ್ತದೆ. ಇಷ್ಟೆಲ್ಲಾ ಪ್ರಕ್ರಿಯೆಗಳು ನಡೆಯುವಾಗಲೂ ಯಾವುದೇ ತೊಂದರೆಯಿಲ್ಲದೇ ಫೋನ್ ಬಳಸಬಹುದು.

■ ಎಸ್. ತುಂಬೆ